**SC No.39/2024**
**PW-4**
**CW-8**

ಕರ್ನಾಟಕ ಸರ್ಕಾರ
(ಸಿ.ಆರ್.ಪಿ.67)

ಹೇಳಿಕೆ ಹಾಳೆ
(ಆರ್.ಪಿ.ಸಂಖ್ಯೆ: 57)
ನಮೂನೆ ಸಂಖ್ಯೆ: 4

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಇವರ ನ್ಯಾಯಾಲಯದಲ್ಲಿ, ಬೆಳಗಾವಿ.**

ಎಸ್.ಸಿ ನಂ:**39/2024**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಜೀತು ತೋಲಾನಿ | ಪ್ರಾಸಾ: 4 |
| ತಂದೆಯ ಹೆಸರು | : | ರಾಜಕುಮಾರ್ ತೋಲಾನಿ | ಚಾಸಾ: 8 |
| ವಯಸ್ಸು | : | 39 ವರ್ಷ | ದಿನಾಂಕ : 19.08.2026 ರಂದು ಸಾಕ್ಷಿದಾರರಿಗೆ ಸತ್ಯಪ್ರತಿಜ್ಞೆಯನ್ನು ಬೋಧಿಸಲಾಯಿತು. |
| ಉದ್ಯೋಗ | : | ಬಟ್ಟೆ ವ್ಯಾಪಾರ | |
| ವಾಸಸ್ಥಳ | : | ಶಿಂಧಿ ಕಾಲನಿ, ಬೆಳಗಾವಿ | |

**ಮುಖ್ಯವಿಚಾರಣೆ: ಮಾನ್ಯ ಸರ್ಕಾರಿ ಅಭಿಯೋಜಕರಿಂದ:**

ನಾನು ಬೆಳಗಾವಿಯ ಗಣಪತಿ ಗಲ್ಲಿಯಲ್ಲಿ ರಾಜಕುಮಾರ ಫ್ಯಾಷನ್ಸ ಮತ್ತು ರಾಜಕುಮಾರ ಕಲೇಕ್ಷನ್ಸ ಎನ್ನುವ ಹೆಸರಿನಲ್ಲಿ ಬಟ್ಟೆ ಅಂಗಡಿಯನ್ನು ನಡೆಸಿಕೊಂಡು ಬರುತ್ತಿದ್ದೇನೆ. ನನಗೆ ಚಾಸಾ-9 ಗೊತ್ತು. ಆತ ನನ್ನ ಅಂಗಡಿಯಲ್ಲಿ ಕೆಲಸಕ್ಕೆ ಇರುತ್ತಾನೆ. ನನಗೆ ಮೃತ ಪ್ರಿಯಾಂಕಾ ಗೊತ್ತು. ಆಕೆ ನನ್ನ ಅಂಗಡಿಯಲ್ಲಿ ಕೆಲಸಕ್ಕೆ ಬರುತ್ತಿದ್ದಳು.

2. ಸೆಪ್ಟೆಂಬರ್ 2023 ರಲ್ಲಿ ಚಾಸಾ-9 ನನಗೆ ಆತನಿಗೆ ಈ ಪ್ರಕರಣದ ಆರೋಪಿಯು ಫೋನ್ ಮಾಡಿ ಪ್ರಿಯಾಂಕಾ ಏನಾದರೂ ಮಾಡಬಹುದು ಈ ಬಗ್ಗೆ ಗಮನ ಕೊಡು ಎಂದು

ನನಗೆ ಹೇಳಿದ್ದಾನೆ ಎಂದು ತಿಳಿಸಿದನು. ನಾನು ಪ್ರಿಯಾಂಕಾ ವಾಸಮಾಡಿಕೊಂಡು ಬರುತ್ತಿದ್ದ ಬಾಡಿಗೆ ಮನೆಯ ಮಾಲೀಕರಿಗೆ ನಾನು ಪೋನ್ ಮಾಡಿ ಈ ವಿಷಯವನ್ನು ತಿಳಿಸಿದೆನು. ಮನೆಯ ಮಾಲೀಕರು ಹೋಗಿ ನೋಡಿದಾಗ ಪ್ರಿಯಾಂಕಾ ನೇಣು ಹಾಕಿ ಆತ್ಮಹತ್ಯೆ ಮಾಡಿಕೊಂಡಿದ್ದಾಳೆಂದು ಅವರಿಗೆ ತಿಳಿಯಿತು. ಅದನ್ನು ನನಗೆ ಮನೆಯ ಮಾಲೀಕರು ಪೋನ್ ಮಾಡಿ ತಿಳಿಸಿದರು. ಪ್ರಿಯಾಂಕಾ ಯಾವ ಕಾರಣಕ್ಕಾಗಿ ಆತ್ಮಹತ್ಯೆ ಮಾಡಿಕೊಂಡಿದ್ದಾಳೆನ್ನುವುದು ನನಗೆ ತಿಳಿದಿಲ್ಲ. ನಾನು ಪೋಲಿಸರು ವಿಚಾರಿಸಿದಾಗ ಈ ವಿಷಯವನ್ನು ಅವರಿಗೆ ತಿಳಿಸಿದ್ದೆ.

ಪಾಟೀ ಸವಾಲುಃ ಆರೋಪಿತರ ಪರವಾಗಿಃ ಶ್ರೀ ಎ. ವಿ. ಎನ್. ವಕೀಲರಿಂದಃ

3. ನನಗೆ ಕನ್ನಡ ಓದಲು ಬರೆಯಲು ಬರುವುದಿಲ್ಲ. ನನ್ನ ಹೇಳಿಕೆ ಕನ್ನಡದಲ್ಲಿ ಇರುವುದರಿಂದ ಅದರಲ್ಲಿ ಏನು ಬರೆದಿದ್ದಾರೆಂದು ನನಗೆ ತಿಳಿದಿಲ್ಲ. ಚಾಸಾ-9 ನನಗೆ ಪೋನ್ ಮಾಡಿ ಆತನಿಗೆ ಆರೋಪಿಗೆ ಪೋನ್ ಮಾಡಿದ್ದ ವಿಷಯವನ್ನ ತಿಳಿಸಿರಲಿಲ್ಲ ಎನ್ನುವುದು ನಿಜವಲ್ಲ. ಚಾಸಾ-9 ನನಗೆ ಪೋನ್ ಮಾಡಿದಾಗ ರಾತ್ರಿ 10-00 ಗಂಟೆ ಆಗಿರಬಹುದು. ಚಾಸಾ-9 ಮತ್ತು ಮೃತ ಪ್ರಿಯಾಂಕಾ ನನ್ನ ಅಂಗಡಿಯಲ್ಲಿ ಸುಮಾರು 4-5 ವರ್ಷಗಳ ಕಾಲ ಕೆಲಸಕ್ಕೆ ಇದ್ದರು. ಮೃತ ಪ್ರಿಯಾಂಕಾ ನನ್ನ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದ ಬಗ್ಗೆ ನಾನು ಪೋಲಿಸರಿಗೆ ಯಾವುದೇ ದಾಖಲಾತಿಗಳನ್ನು ಕೊಟ್ಟಿರುವುದಿಲ್ಲ. ಆರೋಪಿ ಮತ್ತು ಪ್ರಿಯಾಂಕಾಳ ನಡುವೆ ಜಗಳ ಆಗಿರುವ ವಿಷಯ ಚಾಸಾ-9 ರವರಿಗೆ ಹೇಗೆ ತಿಳಿಯಿತು ಎನ್ನುವುದು ನನಗೆ ಗೊತ್ತಿಲ್ಲ. ಚಾಸಾ-9 ಅವರಿಂದ ಪೋನ್ ಬಂದ ಕೂಡಲೇ ನಾನು ಮನೆ ಮಾಲೀಕರಿಗೆ ಪೋನ್ ಮಾಡಿ ಹೇಳಿದ್ದೇನು. ಮನೆ ಮಾಲೀಕರು ನನ್ನ ಮನೆಯ ಹಿಂಭಾಗದಲ್ಲಿಯೇ ವಾಸಮಾಡಿಕೊಂಡು ಇರುವುದರಿಂದ ನನಗೆ ಅವರ ಪರಿಚಯ ಮೊದಲಿನಿಂದಲೇ ಇತ್ತು. ನನ್ನ ಮನೆ ಆ ಬಾಡಿಗೆ ಮನೆ ಮಾಲೀಕರ ಮನೆಯಿಂದ ಸುಮಾರು

ಅರ್ಧ ಕಿ ಮೀ ದೂರದಲ್ಲಿದೆ. ಆರೋಪಿಯು ಚಾಸಾ-9 ರವರಿಗೆ ಪೋನ ಮಾಡಿದ್ದ ಮತ್ತು ಆ ಪ್ರಕಾರ ಆತ ನನಗೆ ಪೋನ ಮಾಡಿ ಹೇಳಿದ್ದ ಮತ್ತು ನಾನು ಬಾಡಿಗೆ ಮನೆಯ ಮಾಲೀಕರಿಗೆ ಪೋನ್ ಮಾಡಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ನಿಜವಲ್ಲ.

ಮರು ಸವಾಲು ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಇದೆ,

(ಮಂಜುನಾಥ ನಾಯಕ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಬೆಳಗಾವಿ.